ಓ.ಎಸ್. ನಂ. 60/2018 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 25.10.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎ.ಸಿ.ಆರ್ ವಕೀಲರಿಂದಃ**

ನನ್ನ ತಂದೆಯ ಹೆಸರು ಸಣ್ಣಪ್ಪ ಅಲಿಯಾಸ್ ಮಾದಪ್ಪ ಆಗಿರುತ್ತದೆ. ನನ್ನ ತಂದೆಯ ಹೆಸರು ಸಣ್ಣಪ್ಪ ಅಲಿಯಾಸ್ ಮಾದಪ್ಪ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಮಾದಪ್ಪ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎನ್ನುವರು. ನನ್ನ ತಂದೆಗೆ ಕಂದಾಯ ದಾಖಲೆಗಳ ಮಾಹಿತಿ ಇತ್ತು. ನನ್ನ ತಂದೆಗೆ ಯಾವ ಯಾವ ವರ್ಷದಲ್ಲಿ ಕಂದಾಯ ದಾಖಲೆಗಳ ಬಗ್ಗೆ ಯಾವ ವ್ಯವಹಾರವಾಗಿರುತ್ತದೆ ಎಂದು ಗೊತ್ತಿತು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಎಲ್ಲಾ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ6 ಮತ್ತು 7 ರಲ್ಲಿ ಕಂಡು ಬರುವ ವೆಂಕಟೇಗೌಡರ ಪರಿಚಯ ನನಗೆ ಇರುತ್ತದೆ. ಕಂದಾಯ ದಾಖಲೆಗಳ ಬಗ್ಗೆ ಗೊತ್ತಾದ ಕೂಡಲೇ ದಾವೆ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿ, ಕಂದಾಯ ಇಲಾಖೆಯವರು ಖಾತೆ ಬದಲಾವಣೆ ಮಾಡದಿದ್ದರಿಂದ ಈ ದಾವೆ ಹೂಡಿರುತ್ತೇನೆ ಎನ್ನುವರು. ಕಂದಾಯ ಇಲಾಖೆಗೆ ನೀಡಿರುವ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಗೆ ಮೇಟಿಕುಪ್ಪೆ ಗ್ರಾಮದಲ್ಲಿ 2 ಮನೆಗಳಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮೇಟಿಕುಪ್ಪೆ ಗ್ರಾಮದಲ್ಲಿ ಊರ ಗೌಡನಾಗಿದ್ದೆ ಎಂದರೆ ಸರಿ. ನಾನು ಊರ ಗೌಡನಾಗಿದ್ದಾಗ ಹಬ್ಬದ ಸಮಯದಲ್ಲಿ 1 ನೇ ಪ್ರತಿವಾದಿಯ ಮನೆಯಿಂದ ಹಣವನ್ನು ವಂತಿಕೆಯಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮೇಟಿಕುಪ್ಪೆ ಗ್ರಾಮದಲ್ಲಿ ಈಗ ಪ್ರತಿ ಎಕರೆಗೆ 25-30 ಲಕ್ಷ ಮೌಲ್ಯವಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಜಮೀನಿನ ಮೌಲ್ಯ ಜಾಸ್ತಿಯಾಗಿರುವುದರಿಂದ ಪ್ರತಿವಾದಿಯರಿಂದ ಹಣ ವಸೂಲಿ ಮಾಡಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯು 1 ರಿಂದ 3 ನೇ ಪ್ರತಿವಾದಿಯರಿಗೆ ಸೇರಿದ್ದು ಅವರು ಪಡೆದುಕೊಂಡಿರುವ ಸಾಲ ಮರುಪಾವತಿ ಮಾಡಲು ಸದರಿ ಆಸ್ತಿಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಆಸ್ತಿಯನ್ನು 1967 ರಲ್ಲಿ ವೆಂಕಟೇಗೌಡರಿಗೆ ಮಾರಾಟ ಮಾಡಿದ್ದು ಅಂದಿನಿಂದ ನಾವು ಸದರಿ ಆಸ್ತಿಯ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು 2018 ರಲ್ಲಿ ಪ್ರತಿವಾದಿಯರು ಬಂದು ಗಲಾಟೆ ಮಾಡಿರುತ್ತಾರೆ ಎನ್ನುವರು. 2018 ರವರೆಗೆ ಸ್ವಾಧೀನದಲ್ಲಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಪ್ರತಿವಾದಿಗಳ ಹೆಸರಿನಲ್ಲಿರುವ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ವೆಂಕಟೇಗೌಡರಿಗೆ ದಾವಆಸ್ತಿಯನ್ನು ಮಾರಾಟ ಮಾಡಿದ ನಂತರ ವಿಭಾಗದಲ್ಲಿ ದಾವಆಸ್ತಿಯು 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿಗೆ

ದಾವಆಸ್ತಿಯು ದಾನಪತ್ರವಾಗಿರುತ್ತದೆ ಎಂದರೆ ಸಾಕ್ಷಿದಾರರು ದಾವೆ ಹಾಕಿದ ನಂತರ ಆಗಿರುತ್ತದೆ ಎನ್ನುವರು. ಅದೇ 2 ನೇ ಪ್ರತಿವಾದಿಯಿಂದ 3 ನೇ ಪ್ರತಿವಾದಿಗೆ ದಾವಆಸ್ತಿಯು ದಾನಪತ್ರವಾಗಿರುತ್ತದೆ ಎಂದರೆ ಸಾಕ್ಷಿದಾರರು ದಾವೆ ಹಾಕಿದ ನಂತರ ಆಗಿರುತ್ತದೆ ಎನ್ನುವರು. ನಂತರ 2 ಮತ್ತು 3 ನೇ ಪ್ರತಿವಾದಿಯರು ಅವರು ಪಡೆದುಕೊಂಡಿದ್ದ ಸಾಲ ಮರುಪಾವತಿಗಾಗಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನಮಗೆ ಮೋಸ ಮಾಡಲು ಮಾರಾಟ ಮಾಡಿರುತ್ತಾರೆ ಎನ್ನುವರು. 4 ನೇ ಪ್ರತಿವಾದಿಗೆ ಈ ದಾವೆ ಹೂಡಿರುವ ಬಗ್ಗೆ ಗೊತ್ತಿರುವುದಿಲ್ಲ, ಅವರು ದಾವಆಸ್ತಿಯ ಕಾನೂನುಬದ್ಧ ಖರೀದಿದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನನಗೂ ದಾವಆಸ್ತಿಗೂ ಸಂಬಂಧವಿರದಿದ್ದರೂ ಸಹ ಪ್ರತಿವಾದಿಯರಿಂದ ಹಣ ವಸೂಲಿ ಮಾಡಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.